155 ನೇ ನಿ-72 = (59) 4/12

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ:-**

ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿ ಬ್ಯಾಲಕೆರೆ ಗ್ರಾಮದ ಸರ್ವೆ ನಂ. 130 ಹಂಚಿಕೆ ಮಾಡಿದ್ದು, ಅಲ್ಲದೇ ಇದೇ ಗ್ರಾಮದ ಸರ್ವೆ ನಂ.24ರಲ್ಲಿ 9-12 ಎಕರೆ/ಗುಂಟೆ ವಿಸ್ತೀರ್ಣ ಸಂಬಂಧಿಸಿದಂತೆ, ಇಂತಹ ಅಕ್ರಮ ನಿವೇಶನ ಹಂಚಿಕೆ ಮಾಡಿದ್ದು, ಅಲ್ಲದೇ ಮೇಡಿ ಅಗ್ರಹಾರ ಸರ್ವೆ ನಂ.24ನ್ನು ದಿನಾಂಕ:06.06.2001 ರಂತೆ ಕರ್ನಾಟಕ ದಲಿತ ಕ್ರಿಯಾ ಸದಸ್ಯರಿಗೆ 9-12 ಎಕರೆ ಸ್ಥಳದಲ್ಲಿ ನಿವೇಶನ ಹಂಚಿಕೆ ಮಾಡಲಾಗಿದ್ದು, ಪ್ರತಿ ನಿವೇಶನಕ್ಕೆ ರೂ.12,000/-ಗಳ ಕಿಮ್ಮತ್ತು ಪಾವತಿಸಿಕೊಂಡಿದ್ದು, ನಿವೇಶನಕ್ಕೆ ಹಕ್ಕುಪತ್ರ ಹಂಚಿಕೆ ಮಾಡಿ, ಉಚಿತವಾಗಿ ಒಂದೇ ಕುಟುಂಬದ ಸದಸ್ಯರಿಗೆ ಹಾಗೂ ಫಲಾನುಭವಿಗಳಿಗೆ ಯಾವುದೇ ದಾಖಲೆ ಇಲ್ಲದೆ ರಾಜಸ್ವ ನಿರೀಕ್ಷಕರು ತನಿಖೆ ಮಾಡಿಸದೆ ಅನರ್ಹರಿಗೆ ಅಕ್ರಮವಾಗಿ ಹಂಚಿಕೆ ಮಾಡಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

* * * *

**ಹೇಳಿಕೆ:-**

ಯಲಹಂಕ ತಾಲ್ಲೂಕು, ಹೆಸರಘಟ್ಟ ಹೋಬಳಿ, ಬ್ಯಾಲಕೆರೆ ಗ್ರಾಮದ ಸ.ನಂ 130 ರಲ್ಲಿ 9-00 ಎಕರೆ ಜಮೀನನ್ನು ಕರ್ನಾಟಕ ದಲಿತ ಕ್ರಿಯಾ ಸಮಿತಿ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ಅಧಿಕೃತ ಜ್ಞಾಪನ ದಿನಾಂಕ: 20.06.2008 ರಂತೆ ಮಂಜೂರಾಗಿದ್ದು, ದಿನಾಂಕ: 3/12/2008 ರಂತೆ ಕಾರ್ಯನಿರ್ವಹಣಾಧಿಕಾರಿ, ಯಲಹಂಕ ತಾಲ್ಲೂಕು ಪಂಚಾಯಿತಿರವರಿಗೆ ಹಸ್ತಾಂತರಗೊಂಡಿರುತ್ತದೆ. ಅದರಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ ರವರ ಅಧ್ಯಕ್ಷತೆಯಲ್ಲಿನ ಪರಿಶೀಲನಾ ಸಮಿತಿಯು 423 ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಕ್ಕು ಪತ್ರ ನೀಡಲಾಗಿರುತ್ತದೆ.

ಬೆಂಗಳೂರು ನಗರ ಜಿಲ್ಲೆ ಯಲಹಂಕ ತಾಲ್ಲೂಕು ಯಲಹಂಕ ಹೋಬಳಿ ಮೇಡಿ ಅಗ್ರಹಾರ ಗ್ರಾಮದ ಸನಂ 24 ರಲ್ಲಿ 9-12 ಎ/ಗು ವಿಸ್ತೀರ್ಣವು ದಲಿತಾ ಕ್ರಿಯ ಸಮಿತಿ ಸದಸ್ಯರಿಗೆ ಜಮೀನು ಮಂಜೂರಿಯಾಗಿದ್ದು ಸದರಿ ಮಂಜೂರಿಯಂತೆ ಕರ್ನಾಟಕ ದಲಿತಾ ಕ್ರಿಯಾ ಸಮಿತಿ ಸದಸ್ಯರಿಗೆ ಆಶ್ರಯ ಯೋಜನೆಯಡಿ 185 ಸದಸ್ಯರಿಗೆ ದಿನಾಂಕ:06-06-2001 ರಂದು ಹಕ್ಕು ಪತ್ರ ವಿತರಿಸಲಾಗಿರುತ್ತದೆ. ಅದರಂತೆ ದಲಿತಾ ಕ್ರಿಯಾ ಸಮಿತಿಯು ದಿನಾಂಕ:21-10-2022 ರಂದು ನೀಡಿರುವ ದೂರಿನಂತೆ ಕೆಲ ಪಲಾನುಭವಿಗಳು ಕಾನೂನು ಉಲ್ಲಂಘನೆ ಮಾಡಿ ಮಾರಾಟ ಮಾಡಿರುವುದರಿಂದ, ಕೆಲ ಫಲಾನುಭವಿಗಳು ನಿವೇಶನವನ್ನು ಉಪಯೊಗಿಸದೇ ಇರುವುದರಿಂದ ಹಾಗೂ ಕೆಲ ಫಲಾನುಭವಿಗಳು ಸಮಿತಿಗೆ ಸುಳ್ಳು ದಾಖಲೆ ನೀಡಿ ನಿವೇಶನ ಪಡೆದಿರುವುದರಿಂದ ಸದರಿ ಹಕ್ಕು ಪತ್ರಗಳನ್ನು ರದ್ದುಪಡಿಸಲು ಕೋರಿರುತ್ತದೆ. ಅದರಂತೆ, ಎಲ್ಲಾ ಫಲಾನುಭವಿಗಳಿಗೆ ಅಂಚೆ ಮೂಲಕ ನೋಟಿಸ್ ನೀಡಲಾಗಿರುತ್ತದೆ. ಬಹುತೇಕ ಫಲಾನುಭವಿಗಳಿಗೆ ನೋಟಿಸ್ ತಲುಪದೆ ಹಿಂದಿರುಗಿರುತ್ತದೆ. ಗೈರು ಹಾಜರಾದ ಹಿನ್ನಲೆಯಲ್ಲಿ ಸ್ಥಳೀಯ ಪತ್ರಿಕೆಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಪ್ರಕಟಿಸಲಾಗಿರುತ್ತದೆ ಆದರೂ ಸಹ ಯಾವುದೇ ಫಲಾನುಭವಿಗಳು ವಿಚಾರಣೆಗೆ ಹಾಜರಾಗಿರುವುದಿಲ್ಲ. ಈ ಹಿನ್ನೆಯಲ್ಲಿ ದಲಿತಾ ಕ್ರಿಯ ಸಮಿತಿ ನೀಡಿರುವ ದಾಖಲೆಯಂತೆ 27 ಫಲಾನುಭವಿಗಳು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಮಾರಾಟ ಮಾಡಿರುತ್ತಾರೆ. 143 ಸದಸ್ಯರುಗಳು 15 ವರ್ಷ ಕಳೆದರು ಮನೆ ನಿರ್ಮಿಸಲು ವಿಫಲರಾಗಿರುತ್ತಾರೆ. 07 ಫಲಾನುಭವಿಗಳು ಸರ್ಕಾರಕ್ಕೆ ಸುಳ್ಳು ದಾಖಲೆ ಒದಗಿಸಿ ನಿವೇಶನದ ಹಕ್ಕು ಪತ್ರಗಳನ್ನು ಪಡೆದಿರುತ್ತಾರೆ. 08 ಫಲಾನುಭವಿಗಳು ಒಂದೇ ಕುಟುಂಬದ ಒಂದಕ್ಕಿಂತ ಹೆಚ್ಚು ಫಲಾನುಭವಿ ಪಡೆದಿರುವುದು

ಕಂಡುಬಂದಿರುವುದರಿಂದ ಜಿಲ್ಲಾಧಿಕಾರಿಯವರು ದಿನಾಂಕ: 02.06.2023ರ ಆದೇಶದಂತೆ ಒಟ್ಟು 185 ಫಲಾನುಭವಿಗಳ ಹಕ್ಕು ಪತ್ರವನ್ನು ರದ್ದುಪಡಿಸಿರುತ್ತಾರೆ.

ಜಿಲ್ಲಾಧಿಕಾರಿಯವರ ದಿನಾಂಕ: 02.06.2023ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: WP/20088/2023, 15800/2023, 16030/2023, 16285/2023, 16881/2023, 7177/2023, 16526/2023, 20763/2023, 21829/2023, ಹಾಗೂ 26057/2023 ರಂತೆ ಪ್ರಕರಣಗಳು ದಾಖಲಾಗಿದ್ದು, ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ.

ಸಂಖ್ಯೆ:ಆರ್.ಡಿ. 151 ಎಲ್.ಜಿ.ಕ್ಯೂ. 2025

(ಕೃಷ್ಣಬೈರೇಗೌಡ)
ಕಂದಾಯ ಸಚಿವರು